ಕಿ.ಮೀ. 11 ರಿಂದ 25ವರೆಗೆ ಮಣ್ಣಿನ ಅಗೆತದ ಕೆಲಸ ಶೇ 94 ಪೂರ್ಣಗೊಂಡಿದೆ.

ಕಿ.ಮೀ. 26 ರಿಂದ 32ವರೆಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಕಿ.ಮೀ. 33 ರಿಂದ 40ವರೆಗೆ ಮಣ್ಣಿನ ಅಗೆತದ ಕೆಲಸ ಶೇ 39 ಪೂರ್ಣಗೊಂಡಿದೆ.

ಕಿ.ಮೀ. 41 ರಿಂದ 77ವರೆಗೆ ಹೊಸದಾಗಿ ಟೆಂಡರ್ ಕರೆಯಲಾಗಿದೆ.

ಕಿ.ಮೀ. 78 ರಿಂದ 97.3ವರೆಗೆ ಕಾಮಗಾರಿಯನ್ನು ಆರಂಭಿಸಲು ವಹಿಸಿಕೊಡಲಾಗಿದೆ.

ಈ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಈ ಕಾಮಗಾರಿಯನ್ನು ಜೂನ್ 2005ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಈ) ಚಿಮ್ಮಲಗಿ ಏತ ನೀರಾವರಿ ಕಾಮಗಾರಿಗಾಗಿ ಸರ್ವೆಕೆಲಸ ಪ್ರಗತಿಯಲ್ಲಿರುತ್ತದೆ. ಈ ಯೋಜನೆಯಿಂದ ಸುಮಾರು 80,940 ಹೆಕ್ಟೇರು ಪ್ರದೇಶವನ್ನು ನೀರಾವರಿಗೆ ಒಳಪಡಿಸಬಹುದಾಗಿದೆ.

ಉ) ಈ ಯೋಜನೆಯ ಸಮೀಕ್ಷೆ ಕಾರ್ಯವು ಈಗಾಗಲೇ ಆರಂಭಿಸಿದ್ದು ವಿವರವಾದ ವರದಿಯನ್ನು ನಿರೀಕ್ಷಿಸಲಾಗಿದೆ.

ಊ) ಮೇಲಿನ (ಈ) ಮತ್ತು (ಉ) ಪ್ರಶ್ನೆಗಳಿಗೆ ಉತ್ತಾರಿಸಿರುವ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಿಂಧಗಿ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿ

1431 (1657) ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಿಂಧಗಿ ತಾಲ್ಲೂಕಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಬರಗಾಲ ಕಾಮಗಾರಿ ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇದುವರೆಗೆ ತೆಗೆದುಕೊಂಡ ಕ್ರಮಗಳೇನು;

ಇ) ಕಾಮಗಾರಿಗಳ ಬಗ್ಗೆ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿಡೆಯೇ;

ಈ) ಇದಕ್ಕೆ ನಿಗದಿಪಡಿಸಿದ ಹಣವೆಷ್ಟು; ಹಣ ಮಂಜೂರು ಮಾಡಲಾಗಿದೆಯೇ; ಮಾಡದಿದ್ದರೆ ಯಾವಾಗ ಮಾಡಲಾಗುವುದು; ತಿಳಿಸುವುದು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) ಹೌದು. ಈ ಬಗ್ಗೆ ಪ್ರಸ್ತಾವನೆಯೊಂದು 2001-2002ನೇ ಸಾಲಿನಲ್ಲಿ ಸ್ವೀಕೃತವಾಗಿತ್ತು.

ಆ) 2001-02ನೇ ಸಾಲಿನಲ್ಲಿ 12 ಲಕ್ಷ ರೂ.ಗಳಿಗೆ ತಯಾರಿಸಿ ಬಿಜಾಪುರ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದ ಕ್ರಿಯಾ ಯೋಜನೆಯ ಬರಗಾಲದ ತೀವ್ರತೆಯು ಕಡಿಮೆಯಾದ ಕಾರಣ ಅನುಮೋದನೆಗೊಂಡಿರುವುದಿಲ್ಲ. ಹಾಗೂ ಇದಕ್ಕೆ ಯಾವುದೇ ಅನುದಾನವು ಬಿಡುಗಡೆಯಾಗಿರುವುದಿಲ್ಲ.

ಇ) ತಯಾರಿಸಲಾಗಿತ್ತು.

ಈ) ಮೇಲೆ ತಿಳಿಸಿರುವಂತೆ ಬರಗಾಲದ ತೀವ್ರತೆ ಕಡಿಮೆಯಾದ ಕಾರಣ 12.00 ಲಕ್ಷ ರೂ.ಗಳಿಗೆ ತಯಾರಿಸಿ, ಸಲ್ಲಿಸಲಾಗಿದ್ದ ಕ್ರಿಯಾ ಯೋಜನೆಗೆ ಅನುಮೋದನೆ ದೊರೆತಿರುವುದಿಲ್ಲ; ಹಾಗೂ ಅನುದಾನವು ಸಹ ಬಿಡುಗಡೆಯಾಗಿರುವುದಿಲ್ಲ.

ನೀರಾವರಿ ಯೋಜನೆಗಳು ಬಾಳೇಕುಂದ್ರಿಯವರು ಮಾಡಿರುವ ಶಿಫಾರಸ್ಸುಗಳ

1432 (1646) ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ (ಅಂಕೋಲ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?